**ಪಾಠ–8** **ಆಗಸ್ಟ್ 15–21**

# ಯೇಸುವಿನ ಹಾಗೆ ದೇವರ ಸೇವೆ ಮಾಡೋಣ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಮತ್ತಾಯ 5:13,14; ಫಿಲಿಪ್ಪಿ 2:15; ಮಾರ್ಕ 12:34; ಎಫೆಸ 4:15; ಮತ್ತಾಯ 4:23–25; ಮತ್ತಾಯ 25:31–46.

**ಸ್ಮರಣವಾಕ್ಯ : ಆದರೆ ಜನರ ಗುಂಪುಗಳನ್ನು ನೋಡಿ ಅವರು ಕುರುಬನಿಲ್ಲದ ಕುರಿಗಳ ಹಾಗೆ ತೊಳಲಿ ಬಳಲಿ ಹೋಗಿದ್ದಾರಲ್ಲ ಎಂದು ಅವರ ಮೇಲೆ ಕನಿಕರಪಟ್ಟನು** (ಮತ್ತಾಯ 9:36).

ಯೇಸುಸ್ವಾಮಿ ಪ್ರಾಮಾಣಿಕವಾಗಿ ತನ್ನ ಜನರ ಸೇವೆ ಮಾಡಿದ್ದನು. ತನಗಿಂತ ಹೆಚ್ಚಾಗಿ ತನ್ನ ಜನರ ಬೇಕು–ಬೇಡಗಳಿಗೆ ಹೆಚ್ಚಿನ ಆಸಕ್ತಿ ವಹಿಸಿದ್ದನು. ಆತನ ಜೀವನ ಸಂಪೂರ್ಣವಾಗಿ ಇತರರ ಮೇಲೆ ಕೇಂದ್ರೀಕೃತವಾಗಿತ್ತು. ಆತನದು ಅನುಕಂಪಪೂರಿತ ಪ್ರೀತಿಮಯ ಸೇವೆ. ತನ್ನ ಸುತ್ತಮುತ್ತ ಇದ್ದವರ ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ ಅವಶ್ಯಕತೆಗಳನ್ನು ಪೂರೈಸುತ್ತಿದ್ದನು. ಈ ಕಾರಣಕ್ಕೆ ಅವರ ಹೃದಯಗಳು ಆತನು ಬೋಧಿಸಿದ ಆಧ್ಯಾತ್ಮಿಕ ಸತ್ಯಗಳಿಗೆ ತೆಳೆದುಕೊಂಡಿದ್ದವು. ಕುಷ್ಠ ರೋಗಿಗಳನ್ನು ವಾಸಿಮಾಡಿದಾಗ, ಕುರುಡರ ಕಣ್ಣುಗಳನ್ನು ತೆರೆದಾಗ, ಕಿವುಡರ ಕಿವಿಗಳನ್ನು ತೆರೆದಾಗ, ದೆವ್ವಗಳನ್ನು ಮೈಮೇಲಿಂದ ಓಡಿಸಿದಾಗ, ಹಸಿದವರಿಗೆ ಊಟ ಕೊಟ್ಟಾಗ, ಅವರ ಅವಶ್ಯಕತೆಗಳು ಪೂರೈಸಿದಾಗ,

* ಆಗಸ್ಟ್ 22ರ ಸಬ್ಬತ್ತಿನ ಪಾಠದ ಸಿದ್ಧತೆಗಾಗಿ ಈ ಪಾಠವನ್ನು ಅಧ್ಯಯನ ಮಾಡಿರಿ.

ಹೃದಯಗಳು ಸ್ಪರ್ಶಿಸಲ್ಪಟ್ಟವು ಮತ್ತು ಜೀವನಗಳು ಬದಲಾವಣೆಗಳೊಗಾದವು. **ಇದಕ್ಕೆ ಕಾರಣ :** ಜನರು ಆತನ ಕಾಳಜಿಯಲ್ಲಿ ಪ್ರಾಮಾಣಿಕತೆಯನ್ನು ಕಂಡದ್ದು. ಆತನು ಬೋಧಿಸಿದ ಆಧ್ಯಾತ್ಮಿಕ ಸತ್ಯಗಳಿಗೆ ಅವರ ಹೃದಯದ ಬಾಗಿಲುಗಳು ತೆರೆದುಕೊಂಡಿದ್ದವು. "ನಾವು ಜನರ ಹೃದಯವನ್ನು ಮುಟ್ಟಬೇಕೆಂದರೆ ಕ್ರಿಸ್ತನ ವಿಧಾನ ಮಾತ್ರ ನಿಜವಾದ ಯಶಸ್ಸನ್ನು ಕೊಡಬಲ್ಲದು. ಜನರ ಯೋಗಕ್ಷೇಮಗಳನ್ನೇ ಬಯಸುವ ರೀತಿಯಲ್ಲಿ ಕ್ರಿಸ್ತನು ಅವರೊಂದಿಗೆ ಬೆರೆತ್ತಿದ್ದನು. ಅವರ ಮೇಲೆ ತನಗಿದ್ದ ಅನುಕಂಪವನ್ನು ಪ್ರದರ್ಶಿಸಿದ್ದನು. ಅವರ ಅವಶ್ಯಕತೆಗಳಿಗೆ ಬೇಕಾದ ಸೇವೆಯನು ಸಲ್ಲಿಸಿದ್ದನು. ಅವರ ಆತ್ಮವಿಶ್ವಾಸವನ್ನು ಗೆದ್ದಿದ್ದನು. ಇಷ್ಟಾದ ಮೇಲೆ ತಾನೇ ಅವರಿಗೆ "**ನನ್ನನ್ನು ಹಿಂಬಾಲಿಸಿರಿ**" ಎಂಬ ಕರೆಕೊಟ್ಟಿದ್ದನು– ಎಲೆನ್ ಜಿ ವೈಟಮ್ಮನವರ ದಿ ಮಿನಿಸ್ಟ್ರಿ ಆಫ್ ಹೀಲಿಂಗ್, ಪುಟ 143.

ಲೋಕಕ್ಕೆ ಸುವಾರ್ತೆಯನ್ನು ಸಾರುವುದು ಎಷ್ಟು ಅವಶ್ಯವೋ ಅದಕ್ಕೆ ತಕ್ಕಂತೆ ನಡೆಯುವುದೂ ಅಷ್ಟೇ ಮುಖ್ಯ ಎಂಬುದನ್ನು ಯೇಸು ಗುರುತಿಸಿದ್ದನು. ಬೇರೆಯವರಿಗೆ ಸೇವೆ ಮಾಡಲು ತನ್ನನ್ನು ಒಪ್ಪಿಸಿಕೊಟ್ಟು ಕ್ರಿಸ್ತನ ರೀತಿ ತಾನಾಡಿದ ಮಾತುಗಳಿಗೂ ಮತ್ತು ತನ್ನ ವಿಶ್ವಾಸಾರ್ಹತೆಯ ಸಾಕ್ಷಿಗೂ ಅವರು ಜೀವಂತ ಸಾಕ್ಷಿಯಾಗಿರಲಿ.

**ಭಾನುವಾರ** **ಆಗಸ್ಟ್ 16**

## ಜನರ ವಿಷಯದಲ್ಲಿ ಕ್ರಿಸ್ತನ ಅಭಿಪ್ರಾಯ

ಯೇಸು ಯಾವಾಗಲೂ ಬೇರೆಯವರಿಂದ ಒಳ್ಳೆಯತನವನ್ನೇ ಎದುರು ನೋಡುತ್ತಿದ್ದನು. ಅವರಲ್ಲಿರುವ ಉತ್ತಮವಾದುದನ್ನು ಹೊರ ತರುತ್ತಿದ್ದನು. ಯೇಸು ಸ್ವಾಮಿಯ ಕಾಲದ ಧಾರ್ಮಿಕ ನಾಯಕ ಆತನ ಬಗ್ಗೆ ಮಾಡುತ್ತಿದ್ದ ಟೀಕೆಗಳಲ್ಲಿ ಒಂದು ಹೀಗಿದೆ : "**ಇವನು ಪಾಪಿಗಳನ್ನು ಸೇರಿಸಿಕೊಂಡು ಅವರ ಜೊತೆಯಲ್ಲಿ ಊಟಮಾಡುತ್ತಾನೆ**" (ಲೋಕ 15:2). ಅವರು ಕ್ರಿಸ್ತನ ಬಗ್ಗೆ ತಲೆಕೆಡಿಸಿಕೊಂಡಿದ್ದಕ್ಕೆ ಕಾರಣ: "**ಅವನು ಅನಾಚಾರಿಗಳೊಂದಿಗೆ ಓಡಾಡುತ್ತಾನೆ ಎಂಬುದು. ಅವರ ಧಾರ್ಮಿಕ ದೃಷ್ಟಿ : ಮನುಷ್ಯರನ್ನು ಒಟ್ಟುಗೂಡಿಸುವುದರಲ್ಲಿ ಅಗಲಿಸುವುದು**" ಯೇಸು ಸ್ವಾಮಿ ತನ್ನ ಬಗ್ಗೆ – "**ನಾನು ನೀತಿವಂತರನ್ನು**

**ಕರೆಯುವುದಕ್ಕೆ ಬಂದವನಲ್ಲ, ಪಾಪಿಗಳನ್ನು ಕರೆಯುವುದಕ್ಕೆ ಬಂದವನು**" ಎಂದು ಹೇಳಿದಾಗ ಅವರು ಆಶ್ಚರ್ಯಚಕಿತರಾಗಿದ್ದರು (ಮತ್ತಾಯ 9:13).

ಶಾಸ್ತ್ರಿಗಳ, ಫರಿಸಾಯರ ಮತ್ತು ಸದ್ದುಕಾಯರ ಧರ್ಮ : "ದೂರವಿರಿಸು" ಎಂಬುದಾಗಿತ್ತು. "ಪಾಪದಿಂದ ಮಲಿನಗೊಳ್ಳುವುದರಿಂದ ದೂರವಿರಲು ಏನಾದರೂ ಮಾಡಿರಿ" ಎಂಬುದು ಅವರ ಆಲೋಚನೆಯಾಗಿತ್ತು. ಯೇಸು ಸ್ವಾಮಿ ಪಾಪದಿಂದ ಮಲಿನವಾಗಲಿಲ್ಲ ನಿಜ, ಆದರೆ ಪಾಪವಿದ್ದ ಹಾವಿನ ಹುತ್ತದಂತಹ ಭೂಮಿಯನ್ನು ಹೊಕ್ಕು, ಪಾಪದಿಂದ ಮಾನವರನ್ನು ಬಿಡಿಸಲೆತ್ನಿಸಿದರೇ ವಿನಹ, ಅವರಿಂದ ದೂರವಿರಲಿಲ್ಲ. ಆದ್ದರಿಂದಲೇ ಯೇಸುಸ್ವಾಮಿ– "**ನಾನೇ ಲೋಕಕ್ಕೆ ಬೆಳಕು**" ಎಂದು ಹೇಳಿದ್ದನು.

**ಮತ್ತಾಯ 5:13,14ನ್ನು ಓದಿರಿ. ಯೇಸುಸ್ವಾಮಿ ತನ್ನ ಹಿಂಬಾಲಕರನ್ನು ವರ್ಣಿಸಲು ಉಪಯೋಗಿಸಿದ ಎರಡು ನಿದರ್ಶನಗಳಾವುವು?**

ನಿರ್ದಿಷ್ಟವಾಗಿ, ಈ ನಿದರ್ಶನಗಳನ್ನೇ ಆತನು ಬಳಸಿದ್ದೇಕೆ ಎಂಬ, ವಿಷಯದಲ್ಲಿ ನಿಮ್ಮ ಚಿಂತನೆ ಏನು? ಯೋಹಾನ 1:9; ಯೋಹಾನ 12:46; ಫಿಲಿಪ್ಪಿ 2:15ನ್ನೂ ಓದಿಕೊಳ್ಳಿರಿ.

ಪುರಾತನ ಕಾಲದಲ್ಲಿ ಉಪ್ಪು ಒಂದು ಅತ್ಯಂತ ಪ್ರಮುಖವಾದ ಸಂಪನ್ಮೂಲವಾಗಿತ್ತು. ಬಹಳಬೆಲೆಯುಳ್ಳದ್ದಾಗಿತ್ತು. ರೋಮನ್ ಸೈನ್ಯದಳ ಅದನ್ನು ಚಲಾವಣೆಯಲ್ಲಿರುವ ನೋಟಾಗಿ ಉಪಯೋಗಿಸಿಕೊಂಡಿದ್ದೂ ಉಂಟು. ಅದು ಸಂಪತ್ತಿನ ಸಂಕೇತವೂ ಆಗಿತ್ತು. ಆಹಾರವನ್ನು ಸಂರಕ್ಷಿಸಲು ಮತ್ತು ಸ್ವಾದಯುಕ್ತ ರುಚಿ ಬರಿಸಲು ಅದನ್ನು ಉಪಯೋಗಿಸುತ್ತಿದ್ದರು. ಯೇಸುಸ್ವಾಮಿ ಉಪ್ಪಿನ ನಿದರ್ಶನದ ಮೂಲಕ, ಅದು ತನ್ನ ಹಿಂಬಾಲಕರನ್ನು ಸಾಂಕೇತಿಸುವುದನ್ನು ಸೂಚಿಸಿ, ಲೋಕದ ನಿಜವಾದ ಸಂಪತ್ತು, ಬಲಶಾಲಿಗಳಾದ ಮತ್ತು ಶ್ರೀಮಂತರಾದ ಜನರಲ್ಲ ಎಂಬ ಸತ್ಯವನ್ನು ಕುರಿತು ಮಾತಾಡಿದ್ದರು. ಲೋಕದ ನಿಜವಾದ ಸಂಪತ್ತು ದೇವರ ರಾಜ್ಯಕ್ಕಾಗಿ ಬದಲಾವಣೆಯನ್ನುಂಟು ಮಾಡುತ್ತಿರುವ ವಚನಬದ್ಧ ಕ್ರೈಸ್ತರೇ ಆಗಿದ್ದಾರೆ. ಅವರ ನಿಸ್ವಾರ್ಥ ಸೇವೆಯ ಪ್ರೀತಿಮಯ ನಡೆ ಪ್ರಪಂಚದ

ಒಳ್ಳೆಯತನವನ್ನೂ ಮತ್ತು ಅದರ ವಾತಾವರಣದ ಸ್ವಾದಯುತ್ತ ರುಚಿಯನ್ನೂ ಸಂರಕ್ಷಿಸುತ್ತದೆ.

ಯೇಸುಸ್ವಾಮಿ ಉಪಯೋಗಿಸಿದ ಎರಡನೇ ನಿದರ್ಶನ : "**ನೀವು ಲೋಕಕ್ಕೆ ಬೆಳಕಾಗಿದ್ದೀರಿ**" ಎಂಬುದು (ಮತ್ತಾಯ 5:14). ಬೆಳಕು ಕತ್ತಲೆಯನ್ನು ಅಡ್ಡಿಪಡಿಸುವುದಿಲ್ಲ, ಆದರೆ ಕತ್ತಲೆಯಲ್ಲಿ ಅದು ಬೆಳಗುತ್ತದೆ. ಕತ್ತಲೆಯಿಂದ ಪ್ರತ್ಯೇಕಗೊಳ್ಳುವುದೂ ಇಲ್ಲ. ಕತ್ತಲೆಯನು ಭೇದಿಸಿಕೊಂಡು ಹೋಗಿ, ಕತ್ತಲೆಯನ್ನು ಬೆಳಕಾಗಿಸುತ್ತದೆ. ಕ್ರಿಸ್ತನ ಹಿಂಬಾಲಕರು, ಬೆಳಕಿನಂತೆಯೇ, ಲೋಕದ ಕತ್ತಲೆಯನ್ನು ಭೇದಿಸಿಕೊಂಡು ಹೋಗಿ ತಮ್ಮ ನೆರೆಹೊರೆ ಹಳ್ಳಿಗಳು, ಪಟ್ಟಣಗಳು ಮತ್ತು ನಗರಗಳು ದೇವರ ಮಹಿಮೆಯಿಂದ ಬೆಳಗುವಂತೆ ಮಾಡಬೇಕು.

**ಯೋಹಾನ 17:15–18ರಲ್ಲಿರುವ ಯೇಸುಕ್ರಿಸ್ತನ ಮಾತುಗಳನ್ನು ಗಮನದಲ್ಲಿಟ್ಟುಕೊಂಡು ಲೋಕದಿಂದ ಪ್ರತ್ಯೇಕಗೊಳ್ಳುವುದು ಮತ್ತು ಲೋಕದಿಂದ ದೂರವಿರುವುದು ಎಂಬ ಕಲ್ಪನೆಗಳನ್ನು ಅರ್ಥಮಾಡಿಕೊಳ್ಳುವುದು ಹೇಗೆ? ಈ ಎರಡೂ ಕಲ್ಪನೆಗಳೂ ಒಂದೇ ಆಗಿವೆಯೇ? ಯೇಸುಸ್ವಾಮಿ ಪ್ರಾರ್ಥನೆ ಮಾಡುವಾಗ ತನ್ನ ಹಿಂಬಾಲಕರು ಪ್ರಪಂಚದಲ್ಲಿ ಇರಬೇಕು. ಆದರೆ ಪ್ರಾಪಂಚಿಕರಾಗಿರಬಾರದು ಎಂದು ಹೇಳಿದ್ದರ ಅರ್ಥವೇನು? ನಾವು ಹಾಗಿರುವುದು ಹೇಗೆ?**

**ಸೋಮವಾರ** **ಆಗಸ್ಟ್ 17**

## ಕ್ರಿಸ್ತನು ಜನರನ್ನು ನಡೆಸಿಕೊಂಡ ಬಗೆ

ಜನರಲ್ಲಿರುವ ಉತ್ತಮವಾದದ್ದನ್ನು ಹೊರತರುವುದೇ ಯೇಸುಸ್ವಾಮಿಯ ಗುರಿಯಾಗಿತ್ತು. ತನ್ನ ಸನ್ನಿವೇಶಗಳು ಅಸಾಮಾನ್ಯವಾಗಿ ಆಕ್ಷೇಪಣೆಗಳನ್ನೇ ಒಡ್ಡುತ್ತಿದ್ದರೂ ಸಹ, ಆತ ಕೃಪೆಯಿಂದಲೇ ಪ್ರತಿಕ್ರಿಯಿಸುತ್ತಿದ್ದನು. ಲೂಕನ ಸುವಾರ್ತೆಯು "**ಎಲ್ಲರು ಆತನನ್ನು ಹೊಗಳಿ ಆತನ ಬಾಯಿಂದ ಹೊರಡುವ ಇಂಪಾದ ಮಾತುಗಳಿಗೆ ಆಶ್ಚರ್ಯಪಟ್ಟು......**" ಎಂದು (ಲೂಕ 4:22) ದಾಖಲಿಸಿದ್ದರೆ, ಯೋಹಾನ– "**ಕೃಪೆಯೂ ಸತ್ಯವೂ ಯೇಸುಕ್ರಿಸ್ತನ ಮುಖಾಂತರ ಬಂದವು**" ಎಂದು ದಾಖಲಿಸಿದ್ದಾನೆ (ಯೋಹಾನ 1:17). ಜನಗಳ ಬಳಿಗೆ ಬರುತ್ತಿದ್ದ ಕ್ರಿಸ್ತನು ಅವರ ನಡುವಿನ ದ್ವೇಷನಿವಾರಣೆ ಮಾಡುತ್ತಿದ್ದನು. ಆತನ

ಕೃಪಾಪೂರ್ಣ ಮಾತುಗಳು ಅವರ ಹೃದಯದಲ್ಲಿ, ಕೂಡಲೆ ಪ್ರತಿಕ್ರಿಯೆ ವ್ಯಕ್ತಪಡಿಸುವ ಭಾವನಾತಂತುಗಳನ್ನು ಸ್ಪರ್ಶಿಸಿದ್ದವು.

**ಮತ್ತಾಯ 8:5–10 ಮತ್ತು ಮಾರ್ಕ 12:34ನ್ನು ಓದಿಕೊಳ್ಳಿರಿ. ಒಬ್ಬ ರೋಮನ್ ಶತಾಧಿಪತಿ ಮತ್ತು ಒಬ್ಬ ಯೆಹೂದಿ ಶಾಸ್ತ್ರಿ ಎಂಬ ಇಬ್ಬರು ಭಿನ್ನಭಾವದವರಿಗೆ ಯೇಸುಕ್ರಿಸ್ತನು ಮಾತನಾಡಿದ ನಿರೀಕ್ಷೆ ತುಂಬಿದ ಮಾತುಗಳಾವುವು?**

______________________________________

______________________________________

ಯೇಸುಕ್ರಿಸ್ತನು ರೋಮನ್ ಸೈನ್ಯದ ದಂಡಾಧಿಕಾರಿಯನ್ನು ಉದ್ದೇಶಿಸಿ ಮಾತನಾಡಿದ ಮಾತುಗಳು ಕ್ರಾಂತಿಕಾರಕವಾದವು. ನಾನು ಇಂಥ ದೊಡ್ಡ ನಂಬಿಕೆಯನ್ನು ಇಸ್ರಾಯೇಲ್ ಜನರಲ್ಲಿಯೂ ಕಾಣಲಿಲ್ಲ ಎಂದು ಹೇಳಿದಾಗ, ಈ ರೋಮನ್ ಅಧಿಕಾರಿಯ ಹೃದಯದಲ್ಲಿ ಎಂತಹ ಭಾವನೆ ಹುಟ್ಟಿರಬೇಕೆಂದು ಆಲೋಚಿಸಿ ನೋಡಿರಿ. ಯೇಸುಸ್ವಾಮಿ– "**ನೀನು ದೇವರರಾಜ್ಯಕ್ಕೆ ದೂರವಾದವನಲ್ಲ**" ಎಂದು ಯೆಹೂದಿ ಶಾಸ್ತ್ರಿಯನ್ನು ಕುರಿತು ಹೇಳಿದಾಗ ಅವನಲ್ಲಿ ಎಂತಹ ಭಾವನೆಗಳುಂಟಾಗಿರಬೇಕು ಎಂಬುದನ್ನು ಕುರಿತು ಆಲೋಚನೆ ಮಾಡಿ ನೋಡಿರಿ. ಜನರಲ್ಲಿರುವ ಉತ್ತಮ ಗುಣಗಳನ್ನು ಹೊರತರುವ ಸಾಮರ್ಥ್ಯ ಯೇಸು ಕ್ರಿಸ್ತನಲ್ಲಿತ್ತು. ಕೆಲವು ಸಂಗತಿಗಳು ಶ್ಲಾಘನೆಯ ರೀತಿಯಲ್ಲಿ ಹೋಗಿ, ಸುವಾರ್ತೆ ಸಾರಲು ಜನರ ಹೃದಯದ ಬಾಗಿಲುಗಳನ್ನು ತೆರೆಯುತ್ತವೆ. ನಿಮ್ಮ ಸುತ್ತಮುತ್ತ ಇರುವ ಜನರಲ್ಲಿರುವ ಒಳ್ಳೆಯತನಗಳನ್ನು ಗುರುತಿಸಿರಿ ಮತ್ತು ನೀವು ಆ ಒಳ್ಳೆಯತನವನ್ನು ಮೆಚ್ಚುತ್ತೀರಿ ಎಂಬುದು ಅವರಿಗೆ ಗೊತ್ತು ಬರುವಂತೆ ಮಾಡಿರಿ.

ಯೆಶಾಯ 42:3; ಕೊಲೊಸ್ಸೆ 4:5,6 ಮತ್ತು ಎಫೆಸ 4:15ನ್ನು ಹೋಲಿಸಿ ನೋಡಿರಿ. ನಾವು ಅನ್ಯರೊಂದಿಗೆ ನಮ್ಮ ನಂಬಿಕೆಗಳನ್ನು ಹಂಚಿಕೊಳ್ಳುವುದರ ಮತ್ತು ಅವರೊಂದಿಗಿನ ನಮ್ಮ ಸಂಬಂಧಗಳ ಕುರಿತು ಈ ವಾಕ್ಯಗಳು ಬೋಧಿಸುವ ಮಹತ್ವಕಾರಿಯಾದ ತತ್ವಗಳಾವುವು?

ನಮ್ಮ ಮಾತುಗಳು ಉತ್ತೇಜನಕಾರಿಯಾಗಿದ್ದು, ಕೃಪೆಯಿಂದ ತುಂಬಿರುವಾಗ, ಅವು ಇತರರ ಜೀವನಗಳ ಮೇಲೆ ಧನಾತ್ಮಕ ಪ್ರಭಾವವನ್ನು ಬೀರುತ್ತವೆ. ಯೆಶಾಯನ – "ಜಜ್ಜಿದ ದಂಟನ್ನು ಮುರಿದು ಹಾಕದೆಯೂ ಆರಿ ಹೋಗುತ್ತಿರುವ ದೀಪವನ್ನು ನಂದಿಸದೆಯೂ ನ್ಯಾಯವನ್ನು ದಿಗ್ವಿಜಯಕ್ಕಾಗಿ ಕಳುಹಿಸಿಕೊಡುವನು" ಎಂಬ ಪ್ರವಾದನಾತ್ಮಕ ಮಾತುಗಳು ಕ್ರಿಸ್ತನನ್ನು ಕುರಿತೇ ಬರೆದವುಗಳಾಗಿದ್ದವು. ಈ ಮಾತುಗಳನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಯೇಸುಕ್ರಿಸ್ತನ ಮಾತುಗಳಲ್ಲಿ ಅದೆಂತಹ ಅನುಕಂಪವಿತ್ತೆಂದರೆ, ಹೊಸದಾಗಿ ಸತ್ಯದ ಹೊಸ್ತಿಲನ್ನು ತುಳಿಯುತ್ತಿರುವವನನ್ನು ಅನಾವಶ್ಯಕವಾಗಿ ನೋಯಿಸುವಂತಿರಲಿಲ್ಲ. ಅಥವಾ ಅವರ ಹೃದಯದಲ್ಲಿ ಸಣ್ಣದಾಗಿ ಹತ್ತಿಕೊಂಡು ಬೆಳಗುತ್ತಿರುವ ನಂಬಿಕೆಯ ಬೆಳಕನ್ನು ನಂದಿಸುವಂತಿರಲಿಲ್ಲ.

**ನಾವು ಒಂದು ಸಂಗತಿಯನ್ನು ಕುರಿತು ಏನು ಹೇಳಬೇಕೆಂದು ಕೊಂಡಿದ್ದೇನೆ ಎನ್ನುವುದಕ್ಕಿಂತ ಹೇಗೆ ಹೇಳುತ್ತೇವೆ ಎಂಬುದು ಮುಖ್ಯ ಅಥವಾ ಬಹಳ ಮುಖ್ಯವೇಕೆ? "ಸತ್ಯ ಸತ್ಯವೇ, ಮತ್ತು ಜನರು ಅದನ್ನು ಅಂಗೀಕರಿಸಿಕೊಂಡರೂ ಅಥವಾ ಅಂಗೀಕರಿಸಿಕೊಳ್ಳದಿದ್ದರೂ ಸತ್ಯ ಸತ್ಯವೇ". ಈ ಹೇಳಿಕೆಗೆ ನೀವು ಹೇಗೆ ಪ್ರತಿಕ್ರಿಯಿಸುತ್ತೀರಿ? ಈ ಸತ್ಯವಾದ ಹೇಳಿಕೆಯಲ್ಲಿರುವ ತಪ್ಪೇನು?**

**ಮಂಗಳವಾರ** **ಆಗಸ್ಟ್ 18**

## ಕ್ರಿಸ್ತನ ರೋಗಗುಣಪಡಿಸುವ ಸೇವೆ : ಭಾಗ – 1

ನಮ್ಮ ಕರ್ತನ ಸುವಾರ್ತೆಯ ವಿಧಾನ, ಕಂಠಪಾಠ ಮಾಡಿದ ಮತ್ತು ಸಮರ್ಥವಾಗಿ ಪ್ರಸ್ತುತ ಪಡಿಸುವ ಭಾಷಣಗಳನ್ನು ಮೀರಿದ್ದು. ಆತನ ವಿಧಾನ ಸಂಪತ್ಭರಿತವಾದ ಮತ್ತು ನೈತಿಕ ಶಕ್ತಿಯಿಂದ ತುಂಬಿದ ವಿಧಾನವಾಗಿತ್ತು. ಪ್ರತಿನಿತ್ಯ ನಾವು ದೈಹಿಕ, ಮಾನಸಿಕ, ಭಾವನಾತ್ಮಕ ಮತ್ತು ಆಧ್ಯಾತ್ಮಿಕ ಅವಶ್ಯಕತೆಗಳಿಂದ ತುಂಬಿರುವ ಜನರನ್ನು ಎಲ್ಲೆಡೆ ಸಂಧಿಸುತ್ತೇವೆ. ಏಕಾಂಗಿತನ, ದುಃಖ ಮತ್ತು ಮನಸ್ಸಿನ ನೋವುಗಳಿಂದ ಇರುವವರ ಬಗ್ಗೆ ನಾವು ವಿಶೇಷ ಕಾಳಜಿ ವಹಿಸಿದಾಗ,

ಯೇಸುಸ್ವಾಮಿ ನಮ್ಮ ಮೂಲಕ ಅದರ ಅವಶ್ಯಕತೆಗಳನ್ನು ಪೂರೈಸುವವನಾಗಿದ್ದಾನೆ. ಅಷ್ಟೇ ಏಕೆ ಅವರ ಸಂತೋಷ, ನಿರೀಕ್ಷೆ ಮತ್ತು ಕನಸುಗಳಲ್ಲಿಯೂ ಆಸಕ್ತಿ ತೋರಿಸುವವನಾಗಿದ್ದಾನೆ.

ಯೇಸುಸ್ವಾಮಿ, ಜನರಿಗೆ ಏನು ಅವಶ್ಯ ಅನ್ನಿಸಿತೋ/ ಭಾವಿಸಿದರೋ ಮೊದಲು ಅವುಗಳ ಸೇವೆ ಮಾಡಿದ್ದನು ಮತ್ತು ಆ ಮೂಲಕ ಕೊನೆಗೆ ಅವರ ಅಂತರಾಳದ ಅವಶ್ಯಕತೆಗಳನ್ನು ಪೂರೈಸುವುದೂ ಆತನಿಗೆ ಸಾಧ್ಯವಾಗಿತ್ತು. ಅವರಿಗೆ ಅನ್ನಿಸಿದ/ ಭಾವಿಸಿದ ಅವಶ್ಯಕತೆಗಳು ಯಾವುದೆಂದರೆ ತಮ್ಮ ಜೀವನದ ಯಾವುದೋ ಒಂದು ಸಂದರ್ಭದಲ್ಲಿ ಆ ಅವಶ್ಯಕತೆಯನ್ನು ತಮ್ಮಿಂದ ಪೂರೈಸುವುದು ಸಾಧ್ಯವೇ ಇಲ್ಲ ಎಂಬ ನಿರ್ಧಾರಕ್ಕೆ ಅವರು ಬಂದಿರುತ್ತಾರೆ. ಅವು : ಬೀಡಿ– ಸಿಗರೇಟ್ ಸೇದುವರನ್ನು ಬಿಡಬೇಕು, ಮೈ ತೂಕ ಇಳಿಸಿಕೊಳ್ಳಬೇಕು, ಪೌಷ್ಟಿಕಾಂಶ ತುಂಬಿದ ಆಹಾರಗಳ ಸೇವೆ ಮಾಡಬೇಕು ಅಥವಾ ಜೀವನದಲ್ಲಿ ಉಂಟಾಗಿರುವ ಒತ್ತಡಗಳನ್ನು ತಗ್ಗಿಸಿಕೊಳ್ಳಬೇಕು ಇತ್ಯಾದಿ ಇರಬಹುದು, ಇನ್ನೂ ಜೀವಿತರಿಗೆ, ಆಹಾರದ, ಮನೆಯ ಅಥವಾ ವೈದ್ಯಕೀಯ ನೆರವಿನ ಅವಶ್ಯಕತೆಗಳೂ ಇರಬಹುದು. ಮದುವೆ ಅಥವಾ ಕೌಟುಂಬಿಕ ಸಮಸ್ಯೆಗಳಿಗೆ ಸಲಹೆಗಳ ಅವಶ್ಯಕತೆಯೂ ಇರಬಹುದು.

ಅಂತ್ಯದಲ್ಲಿ ಮಾನವನಿಗೆ ಬಹುಮುಖ್ಯವಾಗಿ ಬೇಕಾದ ಅವಶ್ಯಕತೆಗಳು– ದೇವರೊಂದಿಗಿನ ವೈಯಕ್ತಿಕ ಸಂಬಂಧದ ಅವಶ್ಯಕತೆ ಮತ್ತು ಅವರ ಜೀವನಕ್ಕೆ ನಿತ್ಯಕಾಲದ ಮಹತ್ವವಿದೆ ಎಂಬುದರ ಪರಿಜ್ಞಾನದ ಅವಶ್ಯಕತೆಯೂ ಆಗಿದೆ. ಈ ಪಾಳುಬಿದ್ದ ಭೂಮಿಯಿಂದ ದೇವರೊಂದಿಗೆ ಸಂಧಾನ ಮಾಡಿಕೊಳ್ಳಬೇಕಾದ್ದು ನಮ್ಮ ಅಂತ್ಯದ ಅವಶ್ಯ ಸಹ ಆಗಿದೆ.

**ಪಾರ್ಶ್ವವಾಯು ರೋಗಿಯ ಕಥೆಯನ್ನು ಮತ್ತಾಯ 9:1–7 ವಚನಗಳಲ್ಲಿಯೂ ಮತ್ತು ರಕ್ತ ಕುಸುಮ ರೋಗದ ಸ್ತ್ರೀಯ ಕಥೆಯನ್ನು ಮಾರ್ಕ 5:25–34 ವಚನಗಳಲ್ಲಿಯೂ ಓದಿಕೊಳ್ಳಿರಿ. ಯೇಸುಸ್ವಾಮಿ ಶಾರೀರಿಕ ಊನವನ್ನು ಗುಣಪಡಿಸಿದ್ದರ ಜೊತೆಗೆ ಕೊನೆಗೆ ದೇವರೊಂದಿಗೆ ಸಂಧಾನ ಮಾಡಿಕೊಳ್ಳಬೇಕು ಎಂಬುದಕ್ಕೆ ಸಂಬಂಧ ಕಲ್ಪಿಸಿರುವುದನ್ನು ಈ ಎರಡೂ ಕಥೆಗಳ ಮೂಲಕ ಸೂಚಿಸಿರುವ ಗುರುತು ಯಾವುದು?**

ಕ್ರಿಸ್ತನ, ರೋಗ ಗುಣಪಡಿಸುವ ಸೇವೆ, ಶಾರೀರಿಕ ಮತ್ತು ಭಾವನಾತ್ಮಕ ರೋಗ–ಗುಣಪಡಿಸುವಿಕೆಯ ಮೀರಿದ್ದನ್ನೂ ಒಳಗೊಂಡಿತ್ತು. ಪಾಪದ ನಿಮಿತ್ತ ಪರಿಪೂರ್ಣ ಆರೋಗ್ಯ ಛಿದ್ರಗೊಂಡ ಕಾರಣ, ಮಾನವ ಮತ್ತೆ ಆ ಪರಿಪೂರ್ಣ ಆರೋಗ್ಯ ಅನುಭವಿಸಬೇಕೆಂಬುದು ಯೇಸುಸ್ವಾಮಿಯ ಹಂಬಲವಾಗಿದೆ. ಕ್ರಿಸ್ತನಿಗೆ ಆಧ್ಯಾತ್ಮಿಕ ಗುಣಪಡಿಸುವಿಕೆ ಮಾಡದೆ ಕೇವಲ ಶಾರೀರಿಕ ಗುಣಪಡಿಸುವಿಕೆಯ ಕೆಲಸ ಅಪೂರ್ಣ ಎನಿಸಿದೆ. ದೇವರ ಪ್ರೀತಿಯು ಒಬ್ಬ ವ್ಯಕ್ತಿಯ ಶಾರೀರಿಕ ಮತ್ತು ಭಾವನಾತ್ಮಕ ಕ್ಷೇಮಾಭ್ಯುದಯ ಬಯಸುವಂತೆ ಮಾಡುವುದು ಮಾತ್ರವಲ್ಲ, ಆ ವ್ಯಕ್ತಿಯ ಆಧ್ಯಾತ್ಮಿಕ ಕ್ಷೇಮಾಭ್ಯುದಯವನ್ನೂ ಬಯಸುವಂತೆ ಮಾಡುತ್ತದೆ. ಆಧ್ಯಾತ್ಮಿಕ ಕ್ಷೇಮಾಭ್ಯುದಯದಿಂದ ವ್ಯಕ್ತಿ ಸಮೃದ್ಧವಾದ ಜೀವನವನ್ನು ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ನಿತ್ಯಕಾಲಕ್ಕೂ ಅನುಭವಿಸಬಹುದಾಗಿದೆ. ಯೇಸುಕ್ರಿಸ್ತನು ವಾಸಿಮಾಡಿದ ಪ್ರತಿ ವ್ಯಕ್ತಿಯೂ ಕಾಲಕ್ರಮೇಣ ಸತ್ತುಹೋದನು. ಆದ್ದರಿಂದಲೇ ಅವರ ನಿಜವಾದ ಅವಶ್ಯಕತೆ, ಎಲ್ಲಕ್ಕಿಂತ ಮುಖ್ಯವಾಗಿ ಆಧ್ಯಾತ್ಮಿಕ ಅವಶ್ಯಕತೆಯೇ ಆಗಿದೆಯಲ್ಲವೇ?

**ಸಮುದಾಯದಲ್ಲಿರುವ ಜನರ ಅವಶ್ಯಕತೆಗಳನ್ನು ಪೂರೈಸಲು ಮತ್ತು ಅವರ ಬಗ್ಗೆ ನಮಗೆ ಕಾಳಜಿಯಿದೆಯೆಂದು ತೋರಿಸಲು ಸಭೆ ಯಾವ ಮುತುವರ್ಜಿಯನ್ನು ತೆಗೆದುಕೊಳ್ಳಬಹುದು. ನಿಮ್ಮ ಸಮುದಾಯದಲ್ಲಿರುವ ಜನರನ್ನು ಕುರಿತು ಚಿಂತನೆ ನಡೆಸಿರಿ. ಜನರ ಜೀವನದಲ್ಲಿ ಬದಲಾವಣೆ ತರಲು ನಿಮ್ಮ ಸಭೆ ಮಾಡುತ್ತಿರುವುದೇನು?**

**ಬುಧವಾರ** **ಆಗಸ್ಟ್ 19**

## ಕ್ರಿಸ್ತನ ಗುಣಪಡಿಸುವ ಸೇವೆ – ಭಾಗ 2

**ಮತ್ತಾಯ 4:23–25 ಮತ್ತು ಮತ್ತಾಯ 9:35ನ್ನು ಓದಿಕೊಳ್ಳಿರಿ. ಯಾವ ಮೂರು ರೀತಿಯ ಅನುಸಂಧಾನ ಕ್ರೈಸ್ತರ ದೇವರ ಸೇವೆ ಅಡಿಪಾಯವನ್ನು**

**ರೂಪಿಸಿಕೊಟ್ಟಿದೆ? ಜನರ ಅವಶ್ಯಕತೆಗಳನ್ನು ಯಾವ ರೀತಿಯಾಗಿ ಕ್ರಿಸ್ತನು ಪೂರೈಸಿದ್ದನು ಮತ್ತು ಅವು ಅವರ ಮೇಲೆ ಉಂಟುಮಾಡಿದ ಪರಿಣಾಮವೇನು?**

---

---

ಕ್ರಿಸ್ತನು ದೇವರ ಸೇವೆಯನ್ನು ಮೂರು ರೀತಿಯಲ್ಲಿ ಸಂಯೋಜನೆಗೊಳಿಸಿದ್ದು ಹೀಗೆ : ಬೋಧನೆ, ಪ್ರಸಂಗ ಮತ್ತು ರೋಗ ಗುಣಪಡಿಸುವಿಕೆ. ಆತನು ಆ ಮುಖಾಂತರ ನಿತ್ಯಕಾಲಕ್ಕೂ ಸಲ್ಲುವ ತತ್ವಗಳನ್ನು ಪ್ರತಿಪಾದಿಸಿದ್ದನು. ಇಂತಹ ತತ್ವಗಳ ಆಧಾರದ ಮೇಲೆ ಒಂದು ಅರ್ಥಪೂರ್ಣ ಹಾಗೂ ಉದ್ದೇಶಪೂರಿತ ಜೀವನ ಸಾಗಿಸುವುದು ನಮಗೆ ಸಾಧ್ಯವಾಗಿದೆ. ಆತನು– "**ನಾನಾದರೋ ಅವುಗಳಿಗೆ ಜೀವವು ಇರಬೇಕೆಂತಲೂ ಅದು ಸಮೃದ್ಧಿಯಾಗಿ ಇರಬೇಕೆಂತಲೂ ಬಂದೆನು**" ಎಂದು ಹೇಳಿದ್ದಾನೆ (ಯೋಹಾನ 10:10). ಆತನ ಸೇವೆ "ಅತೀವ ಸಮೃದ್ಧಿಯ" ಕೃಪೆಯನ್ನು ಪ್ರಕಟಿಸಿದೆ. ನಾವು ಇಂದು ಮತ್ತು ಎಂದೆಂದಿಗೂ ಅತೀವ ಸಮೃದ್ಧಿಯ ಜೀವನವನ್ನು ಜೀವಿಸಬೇಕೆಂದು ಯೇಸುಕ್ರಿಸ್ತನು ಬಂದಿದ್ದನು.

**ಮಾರ್ಕ 1:32–39ನ್ನು ಓದಿಕೊಳ್ಳಿರಿ. ಯೇಸುಕ್ರಿಸ್ತನು ದಿನವೆಲ್ಲ ಜನರ ಕಾಯಿಲೆಗಳನ್ನು ವಾಸಿಮಾಡುವುದರಲ್ಲೂ ಮತ್ತು ದೆವ್ವಗಳನ್ನು ಓಡಿಸುವುದರಲ್ಲೂ ಕಾಲ ಕಳೆದಿದ್ದನು. ಮರುದಿನ ಬೆಳಿಗ್ಗೆ ಪ್ರಾರ್ಥನೆಯಲ್ಲಿ ಕಾಲ ಕಳೆದ ನಂತರ ಜನ ರೋಗಗಳನ್ನು ವಾಸಿಮಾಡಲು ಹುಡುಕುತ್ತಿದ್ದಾರೆ ಎಂಬ ಸುದ್ದಿಯನ್ನು ಕೇಳುತ್ತಾನೆ, ಆದರೆ ಆತನು ಸಮೀಪದ ಹಳ್ಳಿಗಳಿಗೆ ಸುವಾರ್ತೆ ಸಾರಲು ಹೋಗಿ ಬಿಡುತ್ತಾನೆ. ಏಕೆ ಆತನು ಜನರ ಕಾಯಿಲೆ ವಾಸಿಮಾಡಲು ಅಲ್ಲೇ ಉಳಿಯಲಿಲ್ಲ? ಈ ಪ್ರಶ್ನೆಗೆ ಆತನೇ ಕೊಡುವ ಉತ್ತರವನ್ನು ಮಾರ್ಕ 1:38,39ರಲ್ಲಿ ನೋಡೋಣ.**

---

---

ಕಥೆ ಒಳನೋಟಗಳಿಂದ ತುಂಬಿದೆ. ಬಹಳ ಜನರ ಖಾಯಿಲೆಗಳನ್ನು ವಾಸಿ ಮಾಡಿದ ಮರುದಿನ ಮತ್ತಷ್ಟು ಜನರು ಖಾಯಿಲೆ ವಾಸಿಮಾಡಿಕೊಳ್ಳಲು ಆತನನ್ನು

ಹುಡುಕಲಾರಂಭಿಸಿದ್ದರು. ಆದರೆ ಯೇಸು ಆ ಸ್ಥಳ ಬಿಟ್ಟು ಮತ್ತೊಂದು ಹಳ್ಳಿಗೆ ಹೋಗಿಬಿಡುತ್ತಾನೆ. ಈ ಸಂದರ್ಭದಲ್ಲಿ ತಾನು ನಡೆದುಕೊಂಡ ರೀತಿಗೆ ಕೊಡುವ ಕಾರಣ : ತಾನು ಈ ಲೋಕಕ್ಕೆ ಬಂದದ್ದು, ಸುವಾರ್ತೆ ಸಾರುವುದಕ್ಕಾಗಿ ಎಂಬ ಸತ್ಯವನ್ನು ಬಿಚ್ಚಿಡುತ್ತಾನೆ. ಯೇಸು ಒಬ್ಬ ಪ್ರೇಕ್ಷಣೀಯ ಅದ್ಭುತಗಳ ಮಾಡಿತೋರಿಸುವ ಪವಾಡ ಪುರುಷನಲ್ಲ. ಆತ ದೇವರ ಮಗನು. ಮಾನವರನ್ನು ಅವರ ಪಾಪದಿಂದ ಬಿಡುಗಡೆ ಮಾಡಲು ಬಂದವನು. ಶಾರೀರಿಕ ವ್ಯಾಧಿಗಳ ವಾಸಿ ಮಾಡುವುದಷ್ಟೇ ಆತನ ಉದ್ದೇಶವಾಗಿರಲಿಲ್ಲ. ಆತನಲ್ಲಿದ್ದ ನಿತ್ಯಜೀವದ ವರವನ್ನು ಜನರು ಸ್ವೀಕಾರ ಮಾಡಲಿ ಎಂಬುದು ಆತನ ಹಂಬಲವಾಗಿತ್ತು. ಆತನ ಈ ಭೂಮಿಗೆ ಬಂದ ಉದ್ದೇಶವನ್ನು ಬಹುಸ್ಪಷ್ಟವಾಗಿ ಹೀಗೆ ವ್ಯಕ್ತಪಡಿಸಿದ್ದಾನೆ. "ಮನುಷ್ಯಕುಮಾರನು ಕೆಟ್ಟುಹೋಗಿರುವುದನ್ನು ಹುಡುಕಿ ರಕ್ಷಿಸುವುದಕ್ಕೆ ಬಂದನು" (ಲೂಕ 19:10). ಪ್ರತಿಯೊಂದು ರೋಗ ಗುಣಪಡಿಸುವ ಆತನ ನಡೆ ದೇವರ ಗುಣದ ಪ್ರಕಟನೆ, ಸಂಕಷ್ಟ ಉಪಶಮನ ಮತ್ತು ನಿತ್ಯಜೀವ ಪೂರೈಸುವ ಒಂದು ಸುವರ್ಣವಕಾಶವಾಗಿತ್ತು.

**ನೀವು ಬಡತನ ಅಥವಾ ರೋಗಪೀಡಿತರಾಗಿದ್ದರೆ ಯೇಸುಕ್ರಿಸ್ತನು ಹೇಳುವ ಸಮೃದ್ಧ ಜೀವನವನ್ನು ಜೀವಿಸುವುದು ಸಾಧ್ಯವೇ? ಶಾರೀರಿಕ ರೋಗ ಗುಣಪಡಿಸುವಿಕೆಗಿಂತ ಮಿಗಿಲಾದ ಆಳವಾದದ್ದೊಂದನ್ನು ಕೊಡುವುದಾಗಿ ಯೇಸು ಹೇಳಿದನೇ? ನಾವು ಮಾನವರ ಶಾರೀರಿಕ ಮತ್ತು ಭಾವನಾತ್ಮಕ ಅವಶ್ಯಕತೆಗಳನ್ನು ಪೂರೈಸುವಾಗ ಯಾವ ರೀತಿಯಲ್ಲಿ ಅವರನ್ನು ಪ್ರಾಯೋಗಿಕವಾಗಿ ಆಧ್ಯಾತ್ಮಿಕ ಸತ್ಯಗಳ ಕಡೆಗೆ ಕೈಹಿಡಿದು ನಡೆಸಬಹುದು?**

**ಗುರುವಾರ** **ಆಗಸ್ಟ್ 20**

## ಕ್ರಿಸ್ತನಿಗೆ ತನ್ನ ಜನರ ಮೇಲೆ ಕಾಳಜಿಯಿದೆ

ಮತ್ತಾಯನ ಸುವಾರ್ತೆಯ 24ನೇ ಅಧ್ಯಾಯದಲ್ಲಿ ಕ್ರಿಸ್ತನು ತನ್ನ ಶಿಷ್ಯನಿಗೆ ಹೇಳಿದ ಸಂದೇಶದಲ್ಲಿ, ಯೆರೂಸಲೇಮಿನ ವಿನಾಶದ ಮತ್ತು ಮತ್ತಾಯ 25ರ ಅಂತ್ಯಕಾಲಕ್ಕೆ, ಸಂಬಂಧಿಸಿದ ಸಾಮ್ಯಗಳನ್ನು ಅನುಸರಿಸಿ ಬರುವ ಆತನ ಹಿಂತಿರುಗುವ ದಿನದ ಘಟನಾವಳಿಗಳನ್ನೂ ಒಂದುಗೂಡಿಸಿ ಮಾತನಾಡಿದ್ದಾನೆ. ಆತನ ಬರೋಣಕ್ಕೆ ಕಾಯುತ್ತಿರುವ ಜನರಲ್ಲಿ ಇರಬೇಕಾದ ಗುಣನಡವಳಿಕೆಗಳ

(ಗುಣಧರ್ಮಗಳ) ರೂಪುರೇಷೆಯುನ್ನು ಈ ಸಾಮ್ಯಗಳ ಮೂಲಕ ಹಾಕಿಕೊಡಲಾಗಿದೆ. ಯೇಸುಸ್ವಾಮಿಗೆ ತನ್ನ ಜನರ ಮೇಲೆ ಕಾಳಜಿಯಿದೆ. ಮತ್ತು ಸನ್ನಿವೇಶದ, ಸಾಮ್ಯ ನಿಷ್ಕಪಟತೆಯ, ಸತ್ಯವಾದ, ಆತ್ಮನಿಂದ ತುಂಬಿದ ಜೀವನವನ್ನು ಒತ್ತಿ ಹೇಳುತ್ತದೆ. ದೇವರಿಂದ ಪ್ರತಿಯೊಬ್ಬರಿಗೆ ಕೊಡಲಾಗಿರುವ ಆಧ್ಯಾತ್ಮಿಕ ವರಗಳನ್ನು ಪ್ರಾಮಾಣಿಕವಾಗಿ ಉಪಯೋಗಿಸುವುದರ ಪ್ರಾಮುಖ್ಯತೆಯನ್ನೂ ಸಹ ಈ ಸಾಮ್ಯ ಮತ್ತೆ ಮತ್ತೆ ಒತ್ತಿ ಹೇಳಿದೆ. ಯಾವನಿಗೆ ನಿಜವಾದ ಸಹಾಯದ ಅವಶ್ಯವಿದೆಯೂ ಅವರನ್ನು ದೇವರೇ ನಮ್ಮ ಬಳಿಗೆ ಪ್ರತಿನಿತ್ಯ ಕರೆತರುತ್ತಾನೆ. ಅಂತಹವರಿಗೆ ನಿಜವಾಗಿಯೂ ನಮ್ಮ ಸೇವೆಯನ್ನು ಮುಡುಪಾಗಿಡುವುದೇ ನಿಷ್ಕಪಟವಾದ ಕ್ರೈಸ್ತತ್ವವೆಂದು ಆಡು ಮತ್ತು ಕುರಿಗಳ ಸಾಮ್ಯದಲ್ಲಿ ಆತನು ಪ್ರಕಟಿಸಿದ್ದಾನೆ.

**ಮತ್ತಾಯ 25:31–46ನ್ನು ಓದಿಕೊಳ್ಳಿರಿ. ಯೇಸುಕ್ರಿಸ್ತನು ನಿಷ್ಕಪಟ ಕ್ರೈಸತ್ವವನ್ನು ಇಲ್ಲಿ ಹೇಗೆ ವಿವರಿಸಿದ್ದಾನೆ? ಈ ಸತ್ಯವೇದದ ಭಾಗ ಮಾತನಾಡುತ್ತಿರುವ ದೇವರ ಸೇವೆಯ ರಂಗಗಳನ್ನು ಪಟ್ಟಿ ಮಾಡಿರಿ.**

ಈ ಸಾಮ್ಯವು ಜನರ ಶಾರೀರಿಕ ಅವಶ್ಯಕತೆಯನ್ನು ಪೂರೈಸುವುದರ ಬಗ್ಗೆ ಮಾತನಾಡಿದರೂ, ಈ ಸಾಮ್ಯದ ಒಂದು ಮುಖ್ಯಾಂಶವನ್ನು ನಾವು ಅಲಕ್ಷಿಸಬಾರದು. ಇದಕ್ಕಿಂತಲೂ ಅವಶ್ಯವಾದದ್ದು ಬೇರೇನಾದರೂ ಇದೆಯೇ? ಖಂಡಿತವಾಗಿಯೂ ಇದೆ. ಜನರ ಆತ್ಮಗಳು ಗುಪ್ತವಾಗಿ ಕ್ರಿಸ್ತನಿಗಾಗಿ ಹಸಿದು ಬಾಯಾರಿವೆ. ಅವರ ಈ ಹಂಬಲವನ್ನು ನಾವು ಸಂತೃಪ್ತಪಡಿಸಬೇಕಾಗಿದೆ (ಯೋಹಾನ 6:35; ಯೋಹಾನ 4:13,14). ನಾವು ಕ್ರಿಸ್ತನಲ್ಲಿ ಸತ್ಯವಾಗಿ ಗುರುತಿಸಿಕೊಳ್ಳುವವರೆಗೆ, ನಾವು ಆತನನ್ನು ಕಂಡುಕೊಳ್ಳುವವರೆಗೆ, ನಾವು ಅಪರಿಚಿತರಂತೆ ಪರಲೋಕದ ಮನೆಗಾಗಿ ಹಂಬಲಿಸುತ್ತಿರುತ್ತೇವೆ (ಎಫೆಸ 2:12, 13, 19). ನಾವು ಕ್ರಿಸ್ತನ ನೀತಿಯ ವಸ್ತ್ರವನ್ನು ಧರಿಸಿಕೊಳ್ಳುವವರೆಗೆ, ಆಧ್ಯಾತ್ಮಿಕವಾಗಿ ಬೆತ್ತಲೆಯವರೇ ಆಗಿರುತ್ತೇವೆ (ಪ್ರಕ 3:18; ಪ್ರಕ 19:7,8).

ಹಳೇ ಒಡಂಬಡಿಕೆಯ ಪ್ರವಾದಿಗಳು ಮಾನವನ ಸ್ಥಿತಿಯನ್ನು ತಲೆಯೆಲ್ಲಾ ರೋಗ, ಹೃದಯವೆಲ್ಲಾ ದುರ್ಬಲ.... ಎಂದೆಲ್ಲಾ ವರ್ಣಿಸಿದ್ದಾರೆ (ಯೆಶಾಯ 1:5; ಯೆರೆಮೀಯ 30:12–15). ಪಾಪದ ವ್ಯಾಧಿ ಇದೆಯೆಲ್ಲಾ ಅದು ಪ್ರಾಣಾಂತಿಕ, ಆದರೆ ಪ್ರವಾದಿ ನಮ್ಮ ಗಮನವನ್ನು ಪರಿಹಾರದ ಮಾರ್ಗದೆಡೆಗೆ ಹರಿಸಿದ್ದಾನೆ– "**ನಿನಗೆ ಗುಣಪಡಿಸಿ ನಿನ್ನ ಬಾಸುಂಡೆಗಳನ್ನು ವಾಸಿಮಾಡುವೆನು**" (ಯೆರೆ 30:17). ನಮ್ಮ ಆತ್ಮಗಳ ಜೀವ–ಭಯದ ವ್ಯಾಧಿಗಳಿಗೆ ಯೇಸುಸ್ವಾಮಿಗೆ ಪರಿಹಾರ ಮಾರ್ಗ.

ಆಡು ಮತ್ತು ಕುರಿಗಳ ಸಾಮ್ಯವು, ನಮ್ಮ ಸುತ್ತಮುತ್ತಲಿರುವವರ ಶಾರೀರಿಕ ಅವಶ್ಯಕತೆಗಳನ್ನು ಪೂರೈಸುವಂತೆ ಬುದ್ಧಿ ಹೇಳಲಾಗಿದೆ, ಆದರೆ ಆ ಸಾಮ್ಯ ಅದಕ್ಕಿಂತಲೂ ಹೆಚ್ಚಿನ ಬೋಧನೆಯನ್ನೂ ಮಾಡಿದೆ. ಇದು ಕ್ರಿಸ್ತನ ಕಥೆ ಸಹ. ಕ್ರಿಸ್ತನು ನಮ್ಮ ಆತ್ಮದ ಆಳವಾದ ಅವಶ್ಯಕತೆಗಳನ್ನು ಪೂರೈಸುವವನಾಗಿದ್ದಾನೆ. ನಮ್ಮ ಸುತ್ತಮುತ್ತಲಿರುವವರಿಗೆ ಸೇವೆ ಮಾಡಲು ಆತನೊಂದಿಗೆ ಸಹಭಾಗಿಗಳಾಗಲು ಆತ ಆಹ್ವಾನ ಕೊಡುತ್ತಲೇ ಬಂದಿದ್ದಾನೆ. ಸ್ವ–ಕೇಂದ್ರಿತ ಜೀವನ ಜೀವಿಸುವುದು ಮತ್ತು ಇತರರ ದೈಹಿಕ, ಮಾನಸಿಕ, ಭಾವನಾತ್ಮಕ ಹಾಗು ಆಧ್ಯಾತ್ಮಿಕ ಅವಶ್ಯಕತೆಗಳನ್ನು ಅಲಕ್ಷಿಸುವುದರಿಂದ ನಿತ್ಯಜೀವ ಕಳೆದುಕೊಳ್ಳುವ ಗಂಡಾಂತರವಿದೆ. ಈ ಸಾಮ್ಯದಲ್ಲಿ, ಯಾರು ತಮ್ಮ ಜೀವಕ್ಕಿಂತ ಇತರರಿಗಾಗಿ ತಮ್ಮ ಜೀವವನ್ನು ಪಣವಾಗಿಡುತ್ತಾರೋ ಅವರನ್ನು ಶ್ಲಾಘಿಸಲಾಗಿದೆ ಮತ್ತು ಅವರನ್ನು ನಿತ್ಯಜೀವಕ್ಕೆ ಆಹ್ವಾನಿಸಲಾಗಿದೆ. ಅದೇ ಸಮಯದಲ್ಲಿ ಸ್ವಾರ್ಥದಿಂದ ತಮ್ಮ ಅವಶ್ಯಕತೆಗಳಿಗಷ್ಟೇ ಗಮನಕೊಟ್ಟು ಇತರರ ಅವಶ್ಯಕತೆಗಳ ಅಲಕ್ಷಿಸಿದವರನ್ನು ದೇವರು ಖಂಡಿಸಿದ್ದಾನೆ.

**ಶುಕ್ರವಾರ** **ಆಗಸ್ಟ್ 21**

**ಹೆಚ್ಚಿನ ಚಿಂತನೆ :** "ಅನೇಕರಿಗೆ ದೇವರಲ್ಲಿ ನಂಬಿಕೆಯಿಲ್ಲ ಮತ್ತು ಮನುಷ್ಯರಲ್ಲಿ ಆತ್ಮವಿಶ್ವಾಸ ಕಳೆದುಕೊಂಡಿದ್ದಾರೆ. ಆದರೆ ಅನುಕಂಪದ ಮತ್ತು ಸಹಾಯಹಸ್ತದ ನಡೆಯನು ಮೆಚ್ಚುತ್ತಾರೆ. ಈ ಭೂಮಿಯ ಮೇಲಿನ ಯಾವ ಶ್ಲಾಘನೆಯ ಪ್ರೋತ್ಸಾಹವನ್ನು ಅಥವಾ ಯಾವ ಪರಿಹಾರವನ್ನು ಎದುರುನೋಡಿ ರೋಗಿಗಳ ಸೇವೆ ಮಾಡುವ, ಹಸಿದವರಿಗೆ ಅನ್ನವಿಕ್ಕುವ, ಬೆತ್ತಲೆಯಲ್ಲಿರುವವರಿಗೆ ಬಟ್ಟೆ ತೊಡಿಸುವ, ದುಃಖಿಸುತ್ತಿರುವವರಿಗೆ ಸಮಾಧಾನ ಪಡಿಸುವ,

ಸುಕೋಮಲತನದಿಂದ ಎಲ್ಲರನ್ನು ಪ್ರೀತಿ ಮತ್ತು ಕರುಣೆ ತೋರುವ, ದೇವರ ಕಡೆಗೆ ಕೈಹಿಡಿದು ನಡೆಸುವವನು ಕೇವಲ ಮನುಷ್ಯನಲ್ಲಿ ದೇವದೂತನಿದ್ದಂತೆ. ಇದೆಲ್ಲವನ್ನೂ ನೋಡುವವರ ಹೃದಯಗಳು ಅವರ ಕೃತ್ಯಗಳಿಂದ ಸ್ಪರ್ಶಿಸಲ್ಪಡುತ್ತದೆ. ಆಗ ಕೃತಜ್ಞತೆ ತಾನಾಗಿಯೆ ಪುಟಿದು, ನೆಗೆದು ಕಾಣಿಸಿಕೊಳ್ಳುತ್ತದೆ. ನಂಬಿಕೆಗೆ ಕಿಡಿಯಚ್ಚಿದಂತಾಗುತ್ತದೆ. ಈಗ ದೇವರು ತಮ್ಮನ್ನು ಪರಿಪಾಲಿಸುತ್ತಿದ್ದಾನೆ ಎಂಬುದು ಅವರಿಗೆ ಗೊತ್ತಾಗುತ್ತದೆ. ಇಂತಹವರಿಗೆ ಸತ್ಯವೇದ ತೆರೆದು ವಾಕ್ಯ ಹೇಳಲಾರಂಭಿಸಿದರೆ ಕುಳಿತು ಕೇಳಲು ಸಿದ್ಧರಾಗುವರು"– ಎಲೆನ್ ಜಿ ವೈಟ್, ದಿ ಮಿನಿಸ್ಟ್ರಿ ಆಫ್ ಹೀಲಿಂಗ್, ಪುಟ 145.

ಕ್ರಿಸ್ತನ ನಿಸ್ವಾರ್ಥ ಸೇವೆ ಹೃದಯದ ಬಾಗಿಲನ್ನು ತೆರೆಯುತ್ತದೆ, ಪೂರ್ವಾಗ್ರಹ ಪೀಡಿತರ ಹೃದಯವನ್ನು ಛೇದಿಸುತ್ತದೆ. ಅವರ ಹೃದಯದಲ್ಲಿ ಸುವಾರ್ತೆಯನ್ನು ಸ್ವೀಕಾರ ಮಾಡುವ ಒಂದು ಮನಸ್ಸನ್ನು ಸೃಷ್ಟಿಸುತ್ತದೆ. ಕ್ರಿಸ್ತನ ದೇಹವಾದ ಸಭೆಯು ಎಲ್ಲೆಲ್ಲಿಯೂ ಪ್ರೀತಿಯಿಂದ ಅವಶ್ಯವಿರುವವರ ಸೇವೆ ಮಾಡುವುದನ್ನು ಇನ್ನೂ ನಾವು ಕಲಿಯಬೇಕಾಗಿದೆ ಮತ್ತು ಜನ ಈಗ ಎಲ್ಲಿದ್ದಾರೋ ಅಲ್ಲಿಂದ ತೆಗೆದುಕೊಂಡು, ಅವರು ಎಲ್ಲಿರಬೇಕಾಗಿತ್ತೋ ಅಲ್ಲಿಗೆ ಕರೆದೊಯ್ಯಲು ದೇವರೇ ನಮ್ಮನ್ನು ಉಪಯೋಗಿಸಿಕೊಳ್ಳುವನು.

## ಚರ್ಚಿಸಬೇಕಾದ ಪ್ರಶ್ನೆಗಳು

1. ಪೂರ್ವಾಗ್ರಹ ಪೀಡಿತತನವನ್ನು ತೊಡೆದುಹಾಕಲು ಮತ್ತು ಆಧ್ಯಾತ್ಮಿಕ ಸತ್ಯಗಳನ್ನು ಕೇಳಿಸಿಕೊಳ್ಳಲು ಕ್ರಿಸ್ತನ ಅನುಕಂಪದ ಸೇವೆ ಬಲವಾದ ಅಸ್ತ್ರವಾಗಿರುವುದೇಕೆ? ಯೇಸುಕ್ರಿಸ್ತನ ರೀತಿಯಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸಿದಾಗ ನಾವು ಜನರಿಗೆ ಸಲ್ಲಿಸುವ ಸೇವೆ ಅದೆಷ್ಟು ಪರಿಣಾಮಕಾರಿಯಾಗಿರುತ್ತದೆ ಎಂಬುದನ್ನು ಕಲ್ಪಿಸಿ ನೋಡಿರಿ.

2. ನೀವು ಸತ್ಯವಾಗಿಯೂ, ಸರಿಯಾಗಿಯೂ, ಆ ಸಂದರ್ಭಕ್ಕೆ ಅವಶ್ಯವಾದ ಮಾತಾಗಿಯೂ ಇದ್ದದ್ದನ್ನು ಮಾತಾಡಿದಿರಿ, ಆದರೆ ಮಾತಿನಲ್ಲಿ ತಪ್ಪು ಮಾಡಿದ್ದರಿಂದ, ಮಾತಿನ ಧ್ವನಿಯಲ್ಲಿ ಅಥವಾ ವ್ಯಕ್ತಪಡಿಸಿದ ಅಭಿಪ್ರಾಯಗಳು ತಪ್ಪಾಗಿತ್ತು. ಆ ಕಾಲವನ್ನು ಕುರಿತು ಸ್ವಲ್ಪಹೊತ್ತು ಚಿಂತಿಸಿ ನೋಡಿರಿ. ಈ ಅನುಭವದಿಂದ ನೀವು ಕಲಿತಿದ್ದೇನು. ಮತ್ತೆ ಹಾಗೆ ಮಾಡಬಾರದು

ಎಂದು ಅನ್ನಿಸಿದೆ. ಬಹುಶಃ ಮುಂದೆ ಮಾತನಾಡುವಾಗ ಕೋಪದಿಂದ ಮಾತಾಡದೆ ಶಾಂತವಾಗಿ ಮಾತನಾಡಬೇಕು ಎನಿಸಿತೆ?

3. ಖಾಯಿಲೆ ವಾಸಿ ಮಾಡಲ್ಪಟ್ಟವರು ಮತ್ತು ಪುನರುತ್ಥಾನಗೊಂಡವರೂ ಕಾಲಾಂತರದಲ್ಲಿ ಸಾಯುವರು ಎಂಬ ಹೇಳಿಕೆಯನ್ನು ಕುರಿತು ಚಿಂತನೆ ನಡೆಸಿರಿ. ನಮ್ಮ ಸುತ್ತಮುತ್ತಲಿರುವವರಿಗೆ ಯಾವ ರೀತಿಯಾಗಿ ಸೇವೆ ಸಲ್ಲಿಸಬೇಕು ಎಂಬ ವಿಷಯಕ್ಕೆ ಮೇಲಿನ ಚಿಂತನೆ ಹೇಳುವುದೇನು?

4. ಈಗ ನೀವು ನಡೆಸದಿರುವ ಆದರೆ ಎಂತಹ ದೇವರ ಸೇವೆಗಳನ್ನು ನಿಮ್ಮ ಸಭೆ ಮುಂದೆ ನಿಮ್ಮ ಸಮುದಾಯದಲ್ಲಿ ಕೈಗೊಳ್ಳಬಹುದು?

5. ನಮ್ಮ ಅನ್ನಿಸಿಕೆಯ– ಅವಶ್ಯಕತೆ ಸೇವೆಗಳ (Felt-Need Ministries) ಮುಖಾಂತರ ಸೇವೆ ಮಾಡಲು ಮುಂಬರುವವರಿಗೆ ಆಧ್ಯಾತ್ಮಿಕ ಸದಾವಕಾಶಗಳನ್ನು ಹೇಗೆ ಸೃಷ್ಟಿ ಮಾಡಬಹುದು?